ತಯಾರಾಗು, ಯಾರನ್ನೆಲ್ಲ ಆಮಂತ್ರಿಸಬೇಕೋ ಅವರ ಮನೆಗೆ ಹೋಗಿ ಆಹ್ವಾನಿಸಿ ಬರುವಾ, ಹಾಗೆಯೇ ಬರ್ತಾ ಹಣ್ಣು- ಹಂಪಲುಗಳನ್ನು ತರೋಣ'.

ಇಬ್ಬರೂ ಹಳೇ ಗೆಳೆಯರ ಮನೆ ಮನೆಗೆ ಹೋಗಿ ಕರೆಗಂಟೆಯೊತ್ತಿದರು, ರಾತ್ರಿಭೋಜನದ ಆಹ್ವಾನವಿತ್ತರು, ಮರಳುವಾಗ ದಾರಿಯಲ್ಲಿ ಏನೇನೋ ಖರೀದಿಸಿದರು, ಮನೆಗೆ ಬಂದು ಊಟ ಮಾಡಿ ಮತ್ತೆ ನಡುಮನೆಯಲ್ಲಿ ಹೂಗಳನ್ನು ಅಲಂಕರಿಸುತ್ತಾ



ಕುಳಿತರು.

ದಾರಿಯಲ್ಲೂ ಇಬ್ಬರೂ ಮಾತಾಡಿದ್ದು ಅಷ್ಟಕ್ಕಷ್ಟೇ. ಯಾವ ಹಣ್ಣು ತಗೋಳೋಣ? ವೀಳ್ಯದೆಲೆ ತಕ್ಕೋಳ್ಳಣವಾ ಬೇಡವಾ? ಡ್ರಿಂಕ್ಸ್ ಜೊತೆ ಕುರುಕಲು ಕಬಾಬ್ ಎಷ್ಟು ತಗೋಳೋಣ? ಇಂಥವರ ಮನೆ ಈ ಹಾದಿಯಲ್ಲೇ ಇದೆ, ಅವರನ್ನೂ ಕರೆಯೋಣವೇ? ಎಲು ದೀರ್ಘ ವರುಷಗಳ ನಂತರ ಭೇಟಿಯಾಗುತ್ತಿರುವವರು ಮಾತಾಡುವ ಮಾತುಗಳಂತಿರಲಿಲ್ಲ ಅವರ ಸಂಭಾಷಣೆ.

ಅವಳಿಗೆ ಬೆಳಗ್ಗೆ ಅತಿಥಿಗಳ ಮನೆ ಮನೆಗೆ ಹೋಗಿ ಕರೆಗಂಟೆಯೊತ್ತುವಾಗ ಸ್ವಲ್ಪ ಹೊತ್ತು ಮುಜುಗರವೆನಿಸಿತು. ಆಮೇಲೆ ಮನಸ್ಸೂ ಒಗ್ಗಿಕೊಂಡಿತು. ಅವರೆಲ್ಲ ಅವನ ಗೆಳೆಯರಾಗಿದ್ದರೂ ಅವಳಿಗೂ ಬಹಳ ಪರಿಚಿತರಿದ್ದರು. ವರುಷಗಳಿಂದ ಅವಳನ್ನೂ ಬಲ್ಲವರಿದ್ದರು. ಆದರೂ ಅವರೆಲ್ಲ ಬಾಗಿಲು ತೆರೆದಾಗ ಎದುರಿನಲ್ಲಿ ಅವನೊಂದಿಗೆ ಅವಳನ್ನು ಕಂಡು ಅಚ್ಚರಿಪಡುತ್ತ 'ಅರೇ ನೀವು' ಎಂದು ಉದ್ಗರಿಸಿದ್ದರು.

ಪುನಃ ಅವರು ಗಾಡಿಯಲ್ಲಿ ಕುಳಿತುಕೊಳ್ಳುತ್ತಲೇ ಅವನು –ದೊಡ್ಡದಾಗಿ ನಕ್ಕುಬಿಡುತ್ತಿದ್ದ. 'ನೋಡಿದೆಯಾ? ನಮ್ಮನ್ನು ಕಂಡು ಅವನಿಗೆ ಎಷ್ಟು ಶಾಕ್ ಆಯಿತೆಂದರೆ, ಅವನ ಬಾಯಿಕಟ್ಟಿಯೇ ಹೋಗಿತ್ತು'. ಇಂಥವೇ ಒಂದೆರಡು ಅಚ್ಚರಿಗಳ ನಂತರ ಗೆಳೆಯರ ಅಚ್ಚರಿಗಳೂ ಅವರ ಸಾಮಾನ್ಯ ಮಾತಿನ ಸಂಗತಿಯಲ್ಲಿ ಬೆರೆತುಹೋದವು. ಈಗ ಅವಳೂ ಸಹಜವಾಗಿ ನಗತೊಡಗಿದ್ದಳು.

ಸಂಜೆ ಯಾಕೋ ಏನೋ ಅವನು ಎದೆನೋವೆಂದು ಒದ್ದಾಡಿದ. ಅಮ್ಮ ಬಟ್ಟಲಲ್ಲಿ ತುಸು ಬ್ರಾಂಡಿ ಹಾಕಿ ಅವಳ ಕೈಗಿಡುತ್ತಾ – ತಗೋ ಮಗೂ, ಅವನ ಎದೆಗೆ ಸವರು ಇದನ್ನು ಎಂದಳು. ಇಷ್ಟೊತ್ತಿಗಾಗಲೇ ಅವರಿಬ್ಬರೂ ಸದಾ ಜೊತೆಗೇ ಇದ್ದವರಂತೆ ಒಗ್ಗಿಹೋಗಿದ್ದರು. ಅವಳು ಅವನ ಶರಟಿನ ಮೇಲಿನ ಗುಂಡಿ ಬಿಚ್ಚಿ, ತನ್ನ ಕೈಗಳಿಂದ ಅವನ ಎದೆಗೆ ಬ್ರಾಂಡಿ ಉಜ್ಜತೊಡಗಿದಳು.

ಬಹುಶಃ ಹೊರಗಡೆ ತಾಳೆ ಮರದ ಎಲೆಗಳು ಹಾಗೂ ಬಾಳೆಗಿಡದ ಎಲೆಗಳಿನ್ನೂ ಕಂಪಿಸುತ್ತಿದ್ದವೆಂದು ತೋರುತ್ತದೆ. ಆದರೆ ಅವಳ ಕೈಗಳೀಗ ಥರಗುಡುತ್ತಿರಲಿಲ್ಲ. ಒಬ್ಬ ಗೆಳೆಯನಂತೂ ಸಮಯಕ್ಕಿಂತ ಮೊದಲೇ ಆಗಮಿಸಿದ್ದ. ಅವಳು ಬ್ರಾಂಡಿ ಬಳಿದ ಕೈಯಿಂದಲೇ ಅವನಿಗೆ 'ನಮಸ್ಕಾರ' ಹೇಳಿ ಅಭಿವಾದಿಸಿದಳು. ಉಳಿದ ಬ್ರಾಂಡಿಯಲ್ಲಿ ಕೈಯದ್ದಿ ಮತ್ತೊಮ್ಮೆ ಅವನ ಕತ್ತು ಮತ್ತು ಭುಜದವರೆಗೂ ಸವರಿದಳು.

ನಿಧಾನವಾಗಿ ಇಡೀ ಕೋಣೆ ಅತಿಥಿಗಳಿಂದ ತುಂಬಿಹೋಯಿತು. ಅವಳು ಫ್ರಿಜ್ಜಿನಿಂದ ಬರ್ಫನ್ನು ತೆಗೆಯುತ್ತಲೇ ಇದ್ದಳು ಮತ್ತು ಸಾದಾ ನೀರನ್ನು ಫ್ರಿಜ್ಜಿನಲ್ಲಿ ಇಡುತ್ತಲೇ ಇದ್ದಳು. ನಡುನಡುವೆ ಅಡುಗೆಕೋಣೆಗೆ ಹೋಗಿ ತಣ್ಣಗಾಗಿಹೋದ ಕಬಾಬುಗಳನ್ನು ಬಿಸಿ ಮಾಡಿ ತಂದಿಡುತ್ತಿದ್ದಳು. ಬಂದ ಅತಿಥಿಗಳಲ್ಲಿ ಮೂರು ನಾಕು